ನವೆಂಬರ್-ಡಿಸೆಂಬರ್ 2024



ದಿ. ಶ್ರೀ ಅನಂತಕುಮಾರ
ಸಂಸ್ಥಾಪಕರು, ಅದಮ್ಯಚೇತನ,
ಮಾಜಿ ಕೇಂದ್ರ ಸಚಿವರು ಮತ್ತು ಲೋಕಸಭಾ ಸದಸ್ಯರು

# ಅದಮ್ಯ ಚೇತನ

ಓ ನನ್ನ ಚೇತನ ಆಗು ನೀ ಅನಿಕೇತನ

## ತಾಯ್ನೆಲ ಅಂದರೆ ಎಲ್ಲರಿಗೂ ಪವಿತ್ರ

ಇಲ್ಲಿ ಕಾಗದದ ತಟ್ಟೆಗಳಲ್ಲಿ ಎಷ್ಟೊಂದು ಬಣ್ಣಗಳ ಮಣ್ಣುಗಳನ್ನು ಇಡಲಾಗಿದೆ. ನುಣುಪು–ಒರಟುಗಳ ಎಂತೆಂಥ ವೈವಿಧ್ಯವನ್ನೂ ಊಹಿಸಬಹದು. ಪೃಥ್ವಿಯ ಮೇಲೆ ನೂರಾರು ಕೋಟಿ ವರ್ಷಗಳ ಕಾಲ ಜೀವಿಗಳು ನೀರಿನಲ್ಲಿಯೇ ಬದುಕಿ ವಿಕಾಸವಾಗಿದ್ದವು. ಕ್ರಮೇಣ ಅವು ಮೆಲ್ಲಗೆ ಈಚೆ ಬಂದು ನೆಲದಲ್ಲಿ ಆಶ್ರಯ ಪಡೆದು ಮಣ್ಣನ್ನೂ ಸಮೃದ್ಧ ಮಾಡುತ್ತ ಇಲ್ಲೂ ವಿಕಾಸವಾದವು. ಇವನ್ನು ಸೂಕ್ಷ್ಮದರ್ಶಕದಲ್ಲಿ ನೋಡಿದರೆ ಅಲ್ಲೊಂದು ಜೀವಲೋಕವೇ ಕಾಣುತ್ತದೆ. ಇರುವೆಗೂ ಮಣ್ಣು ಬೇಕು; ಪಕ್ಷಿಗೂ ಬೇಕು, ಆನೆಗೂ ಬೇಕು, ನಮಗೂ ಬೇಕು.

'ಮಣ್ಣು ಇಲ್ಲದಿದ್ದರೆ ಬದುಕಲು ಆಧಾರವೇ ಇಲ್ಲ' ಎಂದು ಕನಕದಾಸರು ಹಾಡಿದ್ದ ಮಹತ್ವ ನಮಗೆ ಇಂದು ಗೊತ್ತಾಗುತ್ತಿದೆ.



ನಾವು ಮಣ್ಣನ್ನು ನಾನಾ ವಿಧದಲ್ಲಿ ಕೊಳೆ ಮಾಡುತ್ತಿದ್ದೇವೆ, ಗುಡ್ಡ, ಮೈದಾನದಿಂದ ಮಣ್ಣು ಬಸಿದು ಕೆರೆ ಕಾಲುವೆಗಳಿಗೆ ತುಂಬುತ್ತಿದ್ದೇವೆ. ನಿಮಗೆ ಗೊತ್ತೆ, ಒಂದು ಮುಷ್ಟಿ ಮಣ್ಣು ತಯಾರಾಗಲು 50 ಲಕ್ಷ ವರ್ಷ ಬೇಕಾಗುತ್ತದೆ. ನಾವದನ್ನು ಒಂದೇ ದಿನದಲ್ಲಿ ಜೆಸಿಬಿಯಿಂದ ಸಡಿಲ ಮಾಡಿ, ಮಳೆನೀರಿನ ಮೂಲಕ ಹಳ್ಳಕ್ಕೆ ಕಳಿಸುತ್ತಿದ್ದೇವೆ.

ಡಿಸೆಂಬರ್ 5ನ್ನು 'ವಿಶ್ವ ಮಣ್ಣು ದಿನ' ಎಂದು ಆಚರಿಸುತ್ತೇವೆ. ಅನೇಕ ದೇಶಗಳ ಶಾಲಾ ಮಕ್ಕಳು ಅಂದು ನಾನಾ ಬಗೆಯ ಮಣ್ಣುಗಳನ್ನು ಸಂಗ್ರಹಿಸಿ, ಭೂತಗನ್ನಡಿಯಲ್ಲಿ ಪರೀಕ್ಷೆ ಮಾಡುತ್ತಾರೆ. ಅದರಲ್ಲಿ ಶಂಕು, ಪರಾಗಕಣ, ಎಲೆಚೂರು, ಹಕ್ಕಿಹಿಕ್ಕೆ, ಪ್ಲಾಸ್ಟಿಕ್ ಕಣ ಎಲ್ಲವುಗಳ ಪಟ್ಟಿ ತಯಾರಿಸುತ್ತಾರೆ. ಜೀವಪೋಷಕ ಎನಿಸಿದ ಕಾರ್ಬನ್ ಎಷ್ಟು ಇದೆ ನೋಡುತ್ತಾರೆ. ಎಷ್ಟು ಬಗೆಯ ಕೊಳೆದ್ರವ್ಯ ಸೇರಿವೆ ಪರೀಕ್ಷಿಸುತ್ತಾರೆ. ಮಣ್ಣಿನ ಗುಣಗಾನ ಮಾಡುವ ಹಾಡು, ಚಿತ್ರ, ರಂಗೋಲಿ, ಕತೆ ಬರೆಯುತ್ತಾರೆ. ಬಹುಮಾನ ಪಡೆಯುತ್ತಾರೆ.

ನಿಮ್ಮ ಶಾಲೆಗಳಲ್ಲೂ ಇವೆಲ್ಲ ಸಾಧ್ಯವಿದೆ ತಾನೆ?



## ಅತಿ ಎತ್ತರದ ಪರ್ವತ ಅಂದರೆ ಯಾವುದು?

ನಿಮ್ಮ ಜಿಲ್ಲೆಯಲ್ಲಿ ಅತಿ ಎತ್ತರದ ನೆಲ ಯಾವುದು ಎಂಬುದನ್ನು ನೀವೇ ಪತ್ತೆ ಮಾಡಿ. ಸದ್ಯ ಇಲ್ಲಿ ಕಾಣುವ 'ಮುಳ್ಳಯ್ಯನಗಿರಿ' (1930 ಮೀಟರ್) ಕರ್ನಾಟಕದ ಅತಿ ಎತ್ತರದ ಪರ್ವತ ಎಂಬುದು ದಾಖಲಾಗಿದೆ. ಇದು ಚಿಕ್ಕಮಗಳೂರು ಜಿಲ್ಲೆಯ ಬಾಬಾ ಬುಡನ್ ಮತ್ತು ಚಂದ್ರ ದ್ರೋಣ ಪರ್ವತದ ಸಾಲಿನಲ್ಲಿದೆ. ಭಾರತದ ಮಟ್ಟಿಗೆ ಹಿಮಾಲಯದ 8566 ಮೀಟರ್ ಎತ್ತರದ ಕಾಂಚನಜಂಗಾ (Kangchenjunga) ಪರ್ವತ ಶಿಖರ ಅತಿ ಎತ್ತರದ್ದು. ಭೂಮಿಯ ಮೇಲಿನ ಅತಿ ದೊಡ್ಡ ಪರ್ವತದ ಹೆಸರು ನಿಮಗೆ ಗೊತ್ತೇ ಇದೆ. ಅದು ನೇಪಾಳದಲ್ಲಿರುವ ಎವರೆಸ್ಟ್ ಶಿಖರ. ಅದಕ್ಕೆ 'ಸಾಗರಮಾತಾ' ಮತ್ತು 'ಚೊಮೊಲೊಂಗ್ಮಾ' ಎಂತಲೂ ಹೆಸರುಗಳಿವೆ.

ಸೌರಮಂಡಲದ ಎಂಟೂ ಗ್ರಹಗಳ ಪೈಕಿ ಅತಿ ಎತ್ತರದ ಪರ್ವತ ಯಾವ ಗ್ರಹದಲ್ಲಿದೆ? ಮಂಗಳ ಗ್ರಹದಲ್ಲಿ. ಅದಕ್ಕೆ 'ಒಲಿಂಪಸ್ ಮೊನ್' (Olympus Mon) ಎಂದು ಹೆಸರಿಡಲಾಗಿದೆ. ಆ ಜ್ವಾಲಾಮುಖಿ ಪರ್ವತದ ಎತ್ತರ ಸುಮಾರು 22 ಕಿಲೊಮೀಟರ್. ಅಂದರೆ ಅದು ನಮ್ಮ ಎವರೆಸ್ಟಿಗಿಂತ ಸುಮಾರು ಮೂರು ಪಟ್ಟು ಎತ್ತರದ್ದು!

ಭೂಮಿಯ ಮೇಲಂತೂ ಗುಡ್ಡಬೆಟ್ಟ, ಪರ್ವತಗಳನ್ನು ಸಮುದ್ರ ಮಟ್ಟದಿಂದ ಅಳೆಯುತ್ತಾರೆ. ಸಮುದ್ರವೇ ಇಲ್ಲದ ಮಂಗಳಲೋಕದಲ್ಲಿ ಹೇಗೆ ಎಲ್ಲಿಂದ ಅಳೆಯುತ್ತಾರೆ? ಅದಕ್ಕೊಂದು ಸುಲಭ ಉಪಾಯವಿದೆ. ಅಲ್ಲಿನ ವಾಯುಮಂಡಲ ಅದೆಷ್ಟೇ ತೆಳ್ಳಗಿದ್ದರೂ ಅದೆಷ್ಟೇ ಜೀವವಿರೋಧಿ ಆಗಿದ್ದರೂ ಅದಕ್ಕೂ ಒತ್ತಡ ಇದೆ. 610.5 ಪಾಸ್ಕಲ್ (ಅಥವಾ 6.105 mBar) ವಾಯುಭಾರವನ್ನು 'ತಳಮಟ್ಟ' ಎಂದು ಕಲ್ಪಿಸಿಕೊಂಡು ಅಲ್ಲಿಂದ ಎತ್ತರವನ್ನು ಲೇಸರ್ ಕಿರಣಗಳ ಮೂಲಕ ಅಳೆಯುತ್ತಾರೆ.

ಇದನ್ನೆಲ್ಲ ಇಲ್ಲಿ ಈಗ ಪ್ರಸ್ತಾಪಿಸಿದ್ದು ಏಕೆ ಗೊತ್ತೆ? ಡಿಸೆಂಬರ್ 11ನ್ನು ಎಲ್ಲ ರಾಷ್ಟ್ರಗಳಲ್ಲೂ 'ಪರ್ವತ ದಿನ' ಎಂದು ಆಚರಿಸಲಾಗುತ್ತದೆ. ಗುಡ್ಡ–ಬೆಟ್ಟ–ಗಳಂಥ ಎತ್ತರದ ಭೂಮಿಯ ಮಹತ್ವ ಎಷ್ಟು, ಅವು ಹೇಗೆ ಹೇಗೆ ಜೀವಪೋಷಕ ಆಗಿವೆ; ನಾವು ಹೇಗೆಲ್ಲ ಗುಡ್ಡಗಳನ್ನು ಧ್ವಂಸ ಮಾಡುತ್ತೇವೆ ಎಂಬುದನ್ನೆಲ್ಲ ಪಟ್ಟಿ ಮಾಡೋಣ ಅಂತ. ನಾವೂ ಮಾಡೋಣವೆ ಅಂಥದ್ದೊಂದು ಪಟ್ಟಿಯನ್ನು?

## ಕಾಲ್ಕೆಳಗಿನ ಔಷಧ ಸಸ್ಯ 'ಪುನರ್ನವ'

ಮಳೆಗಾಲ ಮುಗಿದಂತೆ ಬಂದ ಹಾಗೆಲ್ಲ ನಾನಾ ಬಗೆಯ ಕಳೆಸಸ್ಯಗಳನ್ನು ನಾವು ತುಳಿಯುತ್ತ ಸಾಗುತ್ತೇವೆ. ಅವುಗಳಲ್ಲಿ ಪುಟ್ಟ ಪುನರ್ನವ ಸಸ್ಯವೂ ಒಂದಾಗಿರಬಹುದು. ಇದಕ್ಕೆ ಆಯುರ್ವೇದದಲ್ಲಿ ಬಹು ಮಹತ್ವದ ಸ್ಥಾನವಿದೆ. ಗುಡ್ಡಗಾಡು ಪ್ರದೇಶಗಳ ಜನರು ಇದರ ಸಾರು, ಪಲ್ಲೆ ಅಥವಾ ಕಷಾಯ ತಯಾರಿಸಿ ಸೇವನೆ ಮಾಡುತ್ತಾರೆ. ಅಸ್ಸಾಮ್– ಮೇಘಾಲಯ ಕಡೆ ಇವು ಸಂತೆಯಲ್ಲಿ ಮಾರಾಟವಾಗುತ್ತವೆ. ನಾನಾ ಬಗೆಯ ಜೀವಸತ್ವ ಮತ್ತು ಔಷಧಗುಣ ಇದರಲ್ಲಿದೆ ಎನ್ನಲಾಗಿದೆ. ಅದಕ್ಕೇ 'ದೇಹದ ಚೈತನ್ಯವನ್ನು ಪುನಃ ನವೀಕರಿಸುವ ಸಸ್ಯ' (ಪುನರ್ನವ) ಎಂಬರ್ಥದಲ್ಲಿ ಸಂಸ್ಕೃತದಲ್ಲಿ ಹೆಸರಿಸಲಾಗಿದೆ. ಎಲೆಯ ಮಧ್ಯೆ ಪುಟ್ಟ ಬಿಳಿ ಅಥವಾ ಕೆಂಪುಬಣ್ಣದ ಹೂಗಳು ಅರಳುತ್ತವೆ. ಆಯುರ್ವೇದ ಕಂಪನಿಗಳು ಇದರ ಬೇರು ಮತ್ತು ದಂಟುಗಳ ಮಾತ್ರೆ ಮತ್ತು ಲೇಹ್ಯವನ್ನು ಡಬ್ಬಿಯಲ್ಲಿ ಮಾರಾಟ ಮಾಡುತ್ತವೆ. ಇದರ ಸೇವನೆಯಿಂದ ತ್ವಚೆಯ ತುರಿಕೆ, ಅತಿಸಾರ, ಉರಿಯೂತ, ಉದರಶೂಲೆ ಮುಂತಾದ ಕಾಯಿಲೆಗಳ ನಿವಾರಣೆ ಸಾಧ್ಯ ಎಂದೆಲ್ಲ ಗುಣಗಾನ ಮಾಡುತ್ತವೆ. ಸಸ್ಯವಿಜ್ಞಾನದಲ್ಲಿ ಇದಕ್ಕೆ boerhaavia ಎನ್ನುತ್ತಾರೆ.

ಹಸಿಯಾಗಿ ಜಗಿದರೆ ತುಸು ಕಹಿ ಎನಿಸುವ ಈ ಔಷಧ ಸಸ್ಯ ಎಲ್ಲಾದರೂ ಕಣ್ಣಿಗೆ ಬಿದ್ದರೆ ಅದರ ಒಂದು ತುಂಡನ್ನು ಮನೆಯ ಕುಂಡದಲ್ಲಿ ಬೆಳೆಸಿ. ಹೆಸರು ನೆನಪಿರಲಿ! ಕುಂಡವನ್ನು ಎತ್ತಿಡುವಾಗ ಕಟ್ಟಿರುವೆ, ಜೇಡ ಅಥವಾ ಕಣಜದಂಥ ಹುಳಹುಪ್ಪಟೆ ಕಚ್ಚಿದರೆ ಇದರ ರಸವನ್ನು ಹಚ್ಚಿದರೆ ಸಾಕು!





## ಕತ್ತೆಯ ಹಾಲಿನಿಂದ ಕ್ಲಿಯೊಪಾತ್ರಾ ಕ್ರೀಮು!

ಕತ್ತೆ ಎಂದರೆ ಪೆದ್ದು, ದಡ್ಡ, ಸೋಮಾರಿ, ನಿದ್ದಂಡಿ ಎಂಬರ್ಥದ ಬೈಗುಳ ಪದಗಳು ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಬಳಕೆಯಲ್ಲಿವೆ. ಅಮೆರಿಕದ 'ಡೆಮಾಕ್ರಟಿಕ್' ರಾಷ್ಟ್ರೀಯ ಪಕ್ಷದ ಲಾಂಛನವೇ ಕತ್ತೆ. (ಇದೀಗ ಅಧ್ಯಕ್ಷ ಪದವಿಗೆ ಸ್ಪರ್ಧಿಸಿ ಗೆದ್ದ ಡೊನಾಲ್ಡ್ ಟ್ರಂಪ್ ಅವರ 'ರಿಪಬ್ಲಿಕನ್' ಪಕ್ಷದ ಚಿಹ್ನೆ ಆನೆ). ಕತ್ತೆಯ ಸದ್ಗುಣಗಳು ನಮಗೆ ಅಷ್ಟಾಗಿ ಗೊತ್ತಿಲ್ಲ. ಸುಮಾರು ಎರಡೂವರೆ ಸಾವಿರ ವರ್ಷಗಳ ಹಿಂದಿನ ಈಜಿಪ್ಟಿನ ರಾಣಿ ಕ್ಲಿಯೊಪಾತ್ರಾ ಬಗ್ಗೆ ನಮಗೆ ಅನೇಕ ಸ್ವಾರಸ್ಯದ ಕತೆಗಳು ಗೊತ್ತಿವೆ. ಅವಳು ತೊಟ್ಟಿಯಲ್ಲಿ ಕತ್ತೆಯ ಹಾಲನ್ನು ತುಂಬಿಸಿ ಅದರಲ್ಲೇ ಸ್ನಾನ ಮಾಡುತ್ತಿದ್ದಳಂತೆ. ಹಾಗೆ ಮಾಡುತ್ತಿದ್ದರೆ ತ್ವಚೆ ಮಿದುವಾಗಿ, ನಯವಾಗಿ, ಹೊಳಪಾಗಿ ಇರುತ್ತದೆ ಎಂಬುದು ಅಂದಿನವರ ನಂಬಿಕೆಯಾಗಿತ್ತು. ಆಕೆಯ ಒಂದು ಸ್ನಾನಕ್ಕೆ 700 ಹೆಣ್ಣುಕತ್ತೆಗಳ ಹಾಲು ಬೇಕಾಗುತ್ತಿತ್ತಂತೆ. ಇರಲಿ. ಈಗ ಕತ್ತೆಯ ಹಾಲಿನಿಂದ ಸಾಬೂನು ಮತ್ತು ಲೇಪನ (ಕ್ರೀಮ್)ಗಳು ಸಿದ್ಧವಾಗಿವೆ. ಈಚೆಗೆ ಬೆಂಗಳೂರಿನಲ್ಲಿ ನಡೆದ ಕೃಷಿಮೇಳದಲ್ಲಿ ಅಂಥ ಸೌಂದರ್ಯ ಸಾಮಗ್ರಿಗಳು ಪ್ರದರ್ಶನಕ್ಕೆ ಬಂದಿದ್ದವು.

ಕತ್ತೆಯ ಹಾಲಿನಲ್ಲಿ ರೋಗನಿವಾರಕ ಗುಣಗಳಿವೆ ಎಂಬ ನಂಬಿಕೆ ಈಗೀಗ ಬಲಿಯುತ್ತಿದೆ. ಅದಕ್ಕೇ ಲೀಟರಿಗೆ 200 ಮುನ್ನೂರು ರೂಪಾಯಿಗಳಷ್ಟು ಬೆಲೆ ಇದೆ. ಹಾಗೆಂದು ಮರಿಯೊಂದಿಗೆ ಇರುವ ಯಾವುದಾದರೂ ಕತ್ತೆಯ ಹಾಲು ಹಿಂಡಲು ನೀವು ಹೋಗುವುದಾದರೆ ಹುಷಾರಾಗಿರಿ. ಎರಡೂ ಹಿಂಗಾಲುಗಳನ್ನು ಎತ್ತಿ ಮುಂದಕ್ಕೂ ಅಥವಾ ಹಿಂದಕ್ಕೂ ಒದೆಯುತ್ತದೆ. ಹಾಲು ಹಿಂಡುವಾಗ ಕೆಲವು ಹಸುಗಳು ಒಂದೇ ಹಿಂಗಾಲಿನಿಂದ, ಅದೂ– ಮುಂದಕ್ಕೆ ಮಾತ್ರ ಒದೆಯುತ್ತವೆ. ಕತ್ತೆ ಭಾರೀ ಅಪಾಯಕಾರಿ. ಅದಕ್ಕೇ ಮೂರು ಕಾಲುಗಳನ್ನು ಹಗ್ಗದಿಂದ ಕಟ್ಟಿಟ್ಟು ಹಾಲನ್ನು ಹಿಂಡುತ್ತಾರೆ.



## ಕಸ ಎತ್ತುವ ಎಲ್ಲರ ಮಿತ್ರ 'ಆಲ್ಮಿತ್ರಾ ಪಟೇಲ್'

ಬೆಂಗಳೂರಿನ ಅಂಚಿನ ಬಾಗಲೂರು ಎಂಬ ಗ್ರಾಮಾಂತರ ಪ್ರದೇಶದಲ್ಲಿ ವಾಸಿಸುವ 88 ವಯಸ್ಸಿನ ಆಲ್ಮಿತ್ರಾ ಪಟೇಲ್ ಅವರಿಗೆ ಈ ವರ್ಷ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ಸನ್ಮಾನಿಲಾಯಿತು. ಇಪ್ಪತ್ತು ವರ್ಷಗಳ ಹಿಂದೆ ತಿಪ್ಪೆ ತ್ಯಾಜ್ಯಗಳು ನಗರಗಳ ಎಲ್ಲೆಂದರಲ್ಲಿ ಬಿದ್ದಿರುತ್ತಿದ್ದವು. ಎಲ್ಲೋ ವಾರಕ್ಕೊಮ್ಮೆ ಎತ್ತುತ್ತಿದ್ದರು. ನಾಯಿ, ಹಂದಿ, ಕಾಗೆಗಳ ಕಾಟ. ಗಬ್ಬು.

ದೇಶದ ನಗರಗಳು ಶುಚಿಯಾಗಿ ಇರಬೇಕು ಎಂದು ಬಯಸಿ ಈ ಮಹಿಳೆ ನಮ್ಮ ಎಲ್ಲ ರಾಜ್ಯಗಳ ವಿರುದ್ಧ ಸರ್ವೋಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿದರು. ಹದಿನೈದು ವರ್ಷಗಳ ಕಾಲ ಎಲ್ಲ ಕಡೆ ಓಡಾಡಿ, ಕಾನೂನು ತಜ್ಞರ ಸಲಹೆ ಪಡೆದು, ಕಸ ವಿಲೆವಾರಿಯ ಕುರಿತ ಹೊಸ ಕಾನೂನುಗಳು ಹೇಗಿರಬೇಕೆಂದು ನಿರೂಪಿಸಿದರು. ಇಂದು ಯಾವುದೇ ನಗರದಲ್ಲಿ ಕಸದ ರಾಶಿ ಬಿದ್ದಿದ್ದರೆ ಅದಕ್ಕೆ ಸಂಬಂಧಿಸಿದ ಮುನ್ಸಿಪಲ್ ಅಧಿಕಾರಿಗೆ ಜನಸಾಮಾನ್ಯರೂ ಮಕ್ಕಳೂ ದೂರು ನೀಡಬಹುದು. ಕರ್ತವ್ಯಪಾಲನೆ ಮಾಡದ ಅಧಿಕಾರಿಗೆ ದಂಡ, ಜೈಲುಶಿಕ್ಷೆ ಆಗುವಂತೆ ಮಾಡಬಹುದು. ಆ ಅಧಿಕಾರವನ್ನು ನಮಗೆ ಕೊಡಿಸಿದವರು ಆಲ್ಮಿತ್ರಾ ಪಟೇಲ್.

ಇವರು ಅಮೆರಿಕದ ಖ್ಯಾತ ಎಮ್‌ಐಟಿಯಲ್ಲಿ ಎಂಜಿನಿಯರಿಂಗ್ ಪದವಿ ಪಡೆದ ಮೊದಲ ಭಾರತೀಯ ಮಹಿಳೆ!

## ಸೋಲರಿಯದ ಸೋಲಾರ್:

ಸಿಲಿಕಾನ್ ಬಿಲ್ಲೆಗಳನ್ನು ಬಿಸಿಲಲ್ಲಿ ಇಟ್ಟರೆ ಅದರಿಂದ ವಿದ್ಯುತ್ ಕರೆಂಟ್ ಹೊಮ್ಮುತ್ತದೆ ಎಂಬುದು ನಮಗೆಲ್ಲ ಗೊತ್ತಿದೆ. ಅನೇಕ ಛಾವಣಿಗಳ ಮೇಲೆ, ಅಲ್ಲಿ ಇಲ್ಲಿ ಹೊಲಗಳಲ್ಲಿ ಸೋಲಾರ್ ಹಾಸು (ಪ್ಯಾನೆಲ್) ಗಳಿಂದ ವಿದ್ಯುತ್ ಉತ್ಪಾದಿಸಿ ಬಳಸುವುದನ್ನು ನಾವು ನೋಡುತ್ತೇವೆ. ಈಗ ಜಪಾನೀ ವಿಜ್ಞಾನಿಗಳು ಸೋಲಾರ್ ಪೇಂಟ್ ತಯಾರಿಸಿದ್ದಾರೆ. ಇದನ್ನು ಗೋಡೆಗೆ, ಗಾಡಿಗೆ, ಸೂರಿಗೆ, ಪೈಪಿಗೆ ಅಷ್ಟೇಕೆ ಬೆನ್ನಮೇಲಿನ ಬ್ಯಾಗಿಗೂ ಬಳಿಯಬಹುದು, ಸಿಂಪಡನೆ ಮಾಡಬಹುದು. 'ಮಂದ ಬೆಳಕಿನಲ್ಲೂ ಅದರಿಂದ ವಿದ್ಯುತ್ ಪಡೆಯಬಹುದು' ಎಂದು ಇದರ ತಯಾರಕರು ಹೇಳಿದ್ದಾರೆ. ಇನ್ನೇನು, ಕತ್ತಲೆಯಲ್ಲೂ ನಿಮ್ಮ ಬ್ಯಾಗಿನ ಯಾವ ಮೂಲೆಯಲ್ಲಿ ಏನಿದೆ ಎಂದು ಇಣುಕಿ ನೋಡಬಹುದು!

### ಸುಭಾಷಿತ

गते शोको न कर्तव्यः भविष्यं नैव चिन्तयेत् ।
वर्तमानेन कालेन वर्तयन्ति विचक्षणाः ॥

ಗತೇ ಶೋಕೋ ನ ಕರ್ತವ್ಯಃ ಭವಿಷ್ಯಂ ನೈವ ಚಿಂತಯೇತ್ ।
ವರ್ತಮಾನೇನ ಕಾಲೇನ ವರ್ತಯಂತಿ ವಿಚಕ್ಷಣಾಃ ॥

ಕಳೆದು ಹೋದ ಸಂಕಟಗಳ ಬಗ್ಗೆ ದಃಖಿಸಿ ಫಲವಿಲ್ಲ; ಇನ್ನೂ ಬಾರದಿರುವ ಭವಿಷ್ಯದ ಬಗ್ಗೆ ಚಿಂತಿಸಿ ಫಲವಿಲ್ಲ. ಚಾಣಾಕ್ಷರು ವರ್ತಮಾನದ ಕೆಲಸಕಾರ್ಯಗಳಲ್ಲಿ ಮುಳುಗಿರುತ್ತಾರೆ.



## ಮಂಗಟ್ಟೆ ಹಕ್ಕಿಗಳ ಹಬ್ಬ

ಪ್ರಖರ ಬಣ್ಣದ ಉದ್ದ ಕೊಕ್ಕಿನ ಹಕ್ಕಿಗಳಿಗೆ ಕನ್ನಡದಲ್ಲಿ 'ಮಂಗಟ್ಟೆ' ಎನ್ನುತ್ತಾರೆ. ಇಂಗ್ಲಿಷ್‌ನಲ್ಲಿ ಹಾರ್ನ್‌ಬಿಲ್. ಮಂಗಟ್ಟೆಗಳಲ್ಲಿ ಬೂದು ಬಣ್ಣದ ಕೊಕ್ಕಿನವೂ ಇರುತ್ತವೆ. ಮಳೆಕಾಡುಗಳ ಎತ್ತರದ ಮರಗಳ ಪೊಟರೆಗಳಲ್ಲಿ ಹೆಣ್ಣು ಮಂಗಟ್ಟೆ ಮೊಟ್ಟೆಗಳನ್ನಿಟ್ಟು ಕಾವಿಗೆ ಕೂರುತ್ತದೆ. ಅದು ಯಾರಿಗೂ ಕಾಣಬಾರದೆಂದು ಪೊಟರೆಯನ್ನು ಗಂಡುಪಕ್ಷಿ ಮಣ್ಣು–ಸೆಗಣಿಯಿಂದ ಮುಚ್ಚಿಬಿಡುತ್ತದೆ. ಆಹಾರವನ್ನು ನೀಡಲೆಂದು ಒಂದು ಪುಟ್ಟ ಕಿಂಡಿಯನ್ನಷ್ಟೆ ಬಿಟ್ಟಿರುತ್ತದೆ. ಮೊಟ್ಟೆ ಒಡೆದು ಮರಿಗಳು ಬಲಿಯುವವರೆಗೂ ಗಂಡು ಪಕ್ಷಿ ಕಾಡಿನ ಹಣ್ಣುಕಾಯಿ, ಕೀಟ, ಓತಿ–ಕ್ಯಾತ, ಅಳಿಲಿನ ಮರಿ ಮುಂತಾದವನ್ನು ತಂದು ಗೂಡಿನ ಕಿಂಡಿಯೊಳಕ್ಕೆ ತೂರಿಸುತ್ತದೆ. ಅಕಸ್ಮಾತ್ ಗಂಡು ಪಕ್ಷಿಯನ್ನು ಯಾರಾದರೂ ಗುಂಡಿಕ್ಕಿ ಕೊಂದರೆ ಗೂಡಿನಲ್ಲಿರುವ ತಾಯಿ ಮತ್ತು ಮರಿಗಳು ಆಹಾರವಿಲ್ಲದೇ ಇಡೀ ಸಂಸಾರ ನಾಶವಾಗುತ್ತದೆ. ಎಂಥ ದಾರುಣ ಪರಿಸ್ಥಿತಿ, ಊಹಿಸಿಕೊಳ್ಳಿ....

ನಾಗಾಲ್ಯಾಂಡಿನ ಹತ್ತಾರು ಬುಡಕಟ್ಟುಗಳ ಜನರು ಮಂಗಟ್ಟೆಯನ್ನು ದೈವವೆಂದು ಬಗೆಯುತ್ತಾರೆ. ಪೂಜಿಸುತ್ತಾರೆ. ಅವರ ವೇಷಭೂಷಣ, ಹಾಡು, ಚಿತ್ರ, ಕಲಾಕೃತಿಗಳಲ್ಲಿ, ನೃತ್ಯದ ಮುಖವಾಡಗಳಲ್ಲಿ ಮಂಗಟ್ಟೆ ಲಾಂಛನ ಇರುತ್ತದೆ. ಪ್ರತಿ ಡಿಸೆಂಬರ್ 1ರಿಂದ 10 ದಿನಗಳ ಕಾಲ ಅಲ್ಲಿನ ಕೊಹಿಮಾ ಜಿಲ್ಲೆಯಲ್ಲಿ ಮಂಗಟ್ಟೆ ಹಬ್ಬವನ್ನು (ಹಾರ್ನ್‌ಬಿಲ್ ಫೆಸ್ಟಿವಲ್) ಏರ್ಪಡಿಸುತ್ತಾರೆ. ಪ್ರವಾಸಿಗಳಿಗೆ ನೃತ್ಯ, ಸಂಗೀತ, ನಾಟಕ, ವಿಶಿಷ್ಟ ಭೋಜನಗಳ ಆಕರ್ಷಣೆ ನೀಡಿ ಆಮಂತ್ರಿಸುತ್ತಾರೆ. ಹಬ್ಬ ಆಚರಿಸುತ್ತಾರೆ.

ಕರ್ನಾಟಕದಲ್ಲಿ ದಾಂಡೇಲಿಯ ಸಮೀಪ 'ಮಂಗಟ್ಟೆಗಳ ರಕ್ಷಾಧಾಮ' ಇದೆ. ಇಲ್ಲೂ ಅರಣ್ಯ ಇಲಾಖೆಯವರು ಪ್ರವಾಸಿಗಳಿಗಾಗಿ ಈಚಿನ ವರ್ಷಗಳಲ್ಲಿ 'ಹಾರ್ನ್‌ಬಿಲ್' ಹಬ್ಬವನ್ನು ಫೆಬ್ರುವರಿ ತಿಂಗಳಲ್ಲಿ ಸಂಘಟಿಸುತ್ತಿದ್ದಾರೆ.

### ಲೆಕ್ಕದ ಮಜಪ್ರಶ್ನೆ:

ಸಂಖ್ಯೆ 45ರಲ್ಲಿ ಅದೆಷ್ಟು ಬಾರಿ ನೀವು 5ನ್ನು ಕಳೆಯುತ್ತ (ವಜಾ ಮಾಡುತ್ತ) ಹೋಗಬಹುದು?

2□1□6□6 = 48

\+ – × ÷

ಕಳೆದ ತಿಂಗಳಿನ ರಸಪ್ರಶ್ನೆಗೆ ಉತ್ತರ: ಇಲ್ಲಿ ಕೊಟ್ಟ ಸಮೀಕರಣದ ಮಧ್ಯೆ ಇರುವ ಖಾಲಿ ಸ್ಥಳಗಳಲ್ಲಿ ಯಾವ ಗಣಿತ ಚಿಹ್ನೆಗಳನ್ನು ಇಟ್ಟರೆ ಒಟ್ಟೂ ಮೊತ್ತ 48 ಬರುತ್ತದೆ ಎಂದು ಕೇಳಿದ್ದೆವು.
ಉತ್ತರ: $((2 \times 1) + 6) \times 6 = 48$

ಅದಮ್ಯ ಚೇತನ
BBMP ಸಮುದಾಯ ಭವನ, ಗವಿಪುರ, ಬೆಂಗಳೂರು 560019

ಅದಮ್ಯ ಚೇತನ
Adamya Chetana

ಅದಮ್ಯಚೇತನ ಸಂಸ್ಥೆಯಿಂದ ದಿಂದ ಶಾಲಾ ಮಕ್ಕಳಿಗಾಗಿ ಪ್ರಕಾಶಿತವಾಗುವ ಗೋಡೆಪತ್ರಿಕೆ 'ಅದಮ್ಯ ಚೇತನ'.
© ಎಲ್ಲ ಹಕ್ಕುಗಳು ಅದಮ್ಯಚೇತನಕ್ಕೆ ಸೇರಿವೆ
ಸಂಪಾದಕರು: ನಾಗೇಶ ಹೆಗಡೆ ವಿನ್ಯಾಸ: ಶ್ರೀಪಾದ
ಮುದ್ರಣ: ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು
https://adamyachetana.org/
ಪ್ರಕಾಶಕರು: ತೇಜಸ್ವಿನಿ ಅನಂತಕುಮಾರ, ಅದಮ್ಯ ಚೇತನ

ಸಹಯೋಗ:
ಅನಂತಕುಮಾರ ಪ್ರತಿಷ್ಠಾನ
12, ಸುಮೇರು, ಎಮ್ ಎನ್ ಕೃಷ್ಣರಾವ್ ರಸ್ತೆ,
ಬಸವನಗುಡಿ,
ಬೆಂಗಳೂರು 560004
https://akp.org.in/